ಪ್ರಜಾವಾಣಿ

# ಜೈನ್ ಕಾಲೇಜಿನಲ್ಲಿ ಕನ್ನಡ ಕಲರವ



'ಹಚ್ಚೇವು ಕನ್ನಡದ ದೀಪ, ಕರುನಾಡ ದೀಪ, ಸಿರಿ ನುಡಿಯ ದೀಪ, ಒಲವೆತ್ತಿ ತೋರುವ ದೀಪ' ಎಂದು ಜೈನ್ ಕಾಲೇಜಿನ ವಿದ್ಯಾರ್ಥಿಗಳು ಹಾಡುತ್ತಾ, ಕನ್ನಡದ ದೀಪವನ್ನು ನೆರೆದಿದ್ದವರ ಮನದಲ್ಲಿ ಹಚ್ಚುತ್ತಿದ್ದರೆ, ಇಡೀ ವಾತಾವರಣವೆಲ್ಲ ಕನ್ನಡಾಭಿಮಾನದಿಂದ ತುಂಬಿ ತುಳುಕುತ್ತಿತ್ತು.

ಕನ್ನಡ ಭಾಷೆಯ ಸೊಗಡು ಹಾಗೂ ಕನ್ನಡತನವನ್ನು ಜಾಗೃತಗೊಳಿಸುವ ಸಲುವಾಗಿ ವಿಶ್ವೇಶ್ವರಪುರದಲ್ಲಿರುವ ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜು ಹಮ್ಮಿಕೊಂಡಿದ್ದ 'ಕನ್ನಡ ಹಬ್ಬ' ಕಾರ್ಯಕ್ರಮವು ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಸೇತುವೆಯಾಗಿ ಮೂಡಿಬಂದದ್ದು ವಿಶೇಷ.

ನಾವು ಬ್ರಿಟಿಷರನ್ನು ಮಾತ್ರ ಓಡಿಸಿದ್ದೇವೆ. ಆದರೆ, ಅವರ ಭಾಷೆಯನ್ನ ನಮ್ಮಲ್ಲೆ ಉಳಿಸಿಕೊಂಡಿದ್ದೇವೆ. ಇಂದಿನ ಪೀಳಿಗೆಯ ಮಕ್ಕಳಲ್ಲಿ ನಾವು ಸೃಜನಶೀಲತೆಯನ್ನು ಕನ್ನಡ ಭಾಷೆಯ ಮೂಲಕ ಬೆಳೆಸುವ ಅವಶ್ಯಕತೆ ಇದೆ. ಜೈನ್ ಕಾಲೇಜಿನ ವಿದ್ಯಾರ್ಥಿಗಳ ಕನ್ನಡ ಬಗೆಗಿನ ಪ್ರೀತಿ, ಉತ್ಸಾಹ ಕಂಡು ಸಂತಸವಾಯಿತು ಎಂದರು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದಂಥ ಸಾಹಿತಿ ಡಾ. ಚಂದ್ರಶೇಖರ ಕಂಬಾರರು.

ಕನ್ನಡ ಹಬ್ಬ'ದ ಅಂಗವಾಗಿ ಏರ್ಪಡಿಸಿದ್ದ ಸಾಂಸ್ಕೃತಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ನಡೆಸಿಕೊಟ್ಟ ಭರತನಾಟ್ಯ, ಯಕ್ಷಗಾನ, ಕಂಸಾಳೆ, ಭಾವಗೀತೆ ಗಾಯನ ಮತ್ತು ವಾದ್ಯವೃಂದ ಕಾರ್ಯಕ್ರಮಗಳು ಪ್ರೇಕ್ಷಕರ ಮನಸೆಳೆದವು.

ಜೈನ್ ಸಮೂಹ ಸಂಸ್ಥೆಯ ಪಿ.ಯು ಕಾರ್ಯಕ್ರಮ ನಿರ್ದೇಶಕ ಡಾ. ಬಿ.ಟಿ. ವೆಂಕಟೇಶ್, ಪ್ರಾಂಶುಪಾಲ ಡಾ. ಎಸ್.ಎನ್. ನಟರಾಜ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

⌘



ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜು ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳ ಝಲಕ್